

ಮಾತೃತ್ವದ ಮಾದರಿಗಳು: ಸುಕ್ರಿ ಬೊಮ್ಮಗೌಡ ಅವರೊಂದಿಗೆ ದರೋಜಿ ಈರಮ್ಮ, ಉಮಾಶ್ರೀ ಹಾಗೂ ಸಾಲುಮರದ ತಿಮ್ಮಕ್ಕ. ಫೋಟೊ: ಪಿ. ರಂಜು

ಕಲಾಜಗತ್ತಿಗೆ ಪರಿಚಯಗೊಂಡರು. ಎಚ್.ಎಲ್. ನಾಗೇಗೌಡರು ಸುಕ್ರಿ ಅವರ ಹಾಡು ಹಾಗೂ ಅವರ ತಾರ್ಲೆ ನೃತ್ಯವನ್ನು ಚಿತ್ರೀಕರಿಸಿದರು. ಈ ಮೂಲಕವಾಗಿ ಸುಕ್ರಿ ಜಗತ್ತಿಗೆ ತೆರೆದುಕೊಳ್ಳುತ್ತಾ ಸಾಗಿದರು.

ಸಿರಿಕವಲಿ, ಪಾಂಡವರ ಕಮಿ, ಅರ್ಜುನ ಜೋಗಿ ಕಥೆ, ದೂರಿನ ದಂಡಿಗೆ ಹೋದ ಹಾಡು, ಸೀತೆ ಕಮಿ, ಕರಿ ದೇವರ ಹಾಡು, ಒಗಟಿನ ಪದ, ನಾಮಕರಣ, ದೀಪಾವಳಿ, ಮದುವೆ ಚಡಂಗ, ದ್ರೌಪದಿ ಹಾಡು, ರಾಮಾಯಣ ಮಹಾಭಾರತಕ್ಕೆ ಸಂಬಂಧಿಸಿದ ಹಾಡು, ಅಜ್ಜಮುನಿ, ಸುಗ್ಗಿ ಹಬ್ಬ, ಮಾದೇವರಾಯ, ಬಲೀಂದ್ರರಾಯ, ಬೆದ್ರುಂಡೆ ಪದ – ಹೀಗೆ ಅನೇಕ ಹಾಡುಗಳನ್ನು ಅವರು ಹಾಡುತ್ತಿದ್ದರು. ಅವೆಲ್ಲ ಬದುಕಿನ ಪದಗಳು. ಸಹಜ ಸುಂದರ ಅಭಿವ್ಯಕ್ತಿಗಳು. ಅವು ಇಡೀ ಜನಾಂಗದ ಸ್ಥಿತಿಯನ್ನು ನೈಜವಾಗಿ ತೆರೆದಿಡುತ್ತವೆ.

ಕಂಠಸ್ಥ ಪರಂಪರೆಯ ಹಾಡುಗಳನ್ನು ಕಾಯ್ದುಕೊಂಡು ಬರುವುದು ಕಷ್ಟದ ಕೆಲಸ. ಸುಕ್ರಿ ಅವರಿಗೆ ಅದ್ಭುತವಾದ ಸ್ಮರಣಶಕ್ತಿ ಹಾಗೂ ಆಶುಕವಿತ್ವ ಪ್ರತಿಭೆಯಿತ್ತು. ಯಾವುದೇ ಸಂಗತಿಯ ಬಗ್ಗೆ ಕ್ಷಣಮಾತ್ರದಲ್ಲಿ ಕವಿತೆ ರಚಿಸಬಲ್ಲವರಾಗಿದ್ದರು. ಸಾಧಾರಣ ಸಂಗತಿಗಳ ಬಗ್ಗೆ ಹಾಡು ರಚಿಸಿ ರಮ್ಯಲೋಕ ಸೃಷ್ಟಿಸಬಲ್ಲ ಶಕ್ತಿ ಅವರಿಗಿತ್ತು.

ಸುಕ್ರಿ ಅವರು ತಮ್ಮೊಂದಿಗೆ ಹಾಲಕ್ಕಿ ಹೆಂಗಸರ ಪಂಗಡ ಕಟ್ಟಿಕೊಂಡು ಕಾಶಿ, ರಾಮೇಶ್ವರ, ದೆಹಲಿ, ಗೋವಾ, ಮುಂಬೈ ಹೀಗೆ ಅನೇಕ ಊರುಗಳನ್ನು ಸುತ್ತಿದ್ದರು. ಹಾಡು–ಹೋರಾಟ ಎಂದು ಯಾರಾದರೂ ಕರೆದರೆ ಸಾಕು, ನಡುರಾತ್ರಿಯಲ್ಲಾದರೂ ಎದ್ದು ಬರುವ ಹುಮ್ಮಸ್ಸು ಅವರದಾಗಿತ್ತು. ಹಾಡಷ್ಟೇ ಅಲ್ಲ, ಮಾತಿನಲ್ಲಿಯೂ ಸುಕ್ರಿ ತುಂಬಾ ಜಾಣೆಯಾಗಿದ್ದರು. ಪರಿಸರ, ಜಾನಪದ, ಮನುಕುಲದ ಬಗ್ಗೆ ಮಾತನಾಡಬೇಕಾದರೆ ಯಾರ ಬಳಿಯಾದರೂ ವಾದಕ್ಕೆ ನಿಂತು ಚರ್ಚಿಸುವ ಛಲಗಾರ್ತಿಯಾಗಿದ್ದರು. ಒಬ್ಬರೇ ಹಾಡದೆ, ತಮ್ಮ ಜೊತೆ ಮಹಿಳೆಯರನ್ನು ಸೇರಿಸಿಕೊಂಡು, ಅವರಿಗೂ ಹಾಡು ಹೇಳಿಕೊಟ್ಟು ಹಾಡುವ ಗುಣ ಅವರದಾಗಿತ್ತು. ಹಾಡಿನ ಬಗೆಗಿನ ಆ ಪ್ರೀತಿಯೇ ಅವರನ್ನು ಪದ್ಮಶ್ರೀವರೆಗೂ ಕರೆದೊಯ್ದಿತು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ ಮುಂತಾದ ಅನೇಕ ಪ್ರಶಸ್ತಿಗಳು ಅವರನ್ನು ಹುಡುಕಿ ಬಂದವು.

ಸುಕ್ರಿಯ ಹಿರಿಯರು ಕಾಡು, ಕೃಷಿ ನಂಬಿಕೊಂಡು ಬಂದವರು. ಕೃಷಿ ಕೆಲಸ ಮಾಡಲು ತೆರಳುತ್ತಿದ್ದ ಸುಕ್ರಿ ಚಿಕ್ಕಂದಿನಿಂದಲೂ ಅನೇಕ ಸಸ್ಯಗಳ, ಹುಲ್ಲುಗಳ ಬಗ್ಗೆ ವಿಷಯ ತಿಳಿದವರಾಗಿದ್ದರು. ಕಡಕೇರಿ, ಗೊಂಡೆಗರಡ, ಕೋಲಿ ಹುಲ್ಲು, ಗುಬ್ಬಿ ಹುಲ್ಲು – ಹೀಗೆ ನಾನಾ ಹೆಸರನ್ನು ಸರಸರನೆ ಹೇಳುತ್ತಿದ್ದರು. ಬೇಟೆ ಜ್ಞಾನ, ಕಾಡಿನ ಆಹಾರ, ಸಸ್ಯ ಜ್ಞಾನದ ಅರಿವಿನ ಜೊತೆಗೆ ನಾಟಿವೈದ್ಯೆಯಾಗಿಯೂ ಪ್ರಸಿದ್ಧರಾಗಿದ್ದರು.

ಹೋರಾಟಗಾರ್ತಿಯಾಗಿ ಸುಕ್ರಿಯವರು ಹಾಡುಗಳ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಿದ್ದಾರೆ. ಹಿಡಿಕೊಚ್ಚಿನ ಚಳವಳಿ, ಸಾರಾಯಿ ವಿರೋಧ ಹೋರಾಟ, ಸಾಕ್ಷರತಾ ಆಂದೋಲನ, ಪರಿಸರ ರಕ್ಷಣೆ ಹೋರಾಟ, ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಚಳವಳಿ ಸೇರಿದಂತೆ ಅನೇಕ ಹೋರಾಟಗಳಲ್ಲಿ ಅವರು ಭಾಗವಹಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ, ಜನಪದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಜಾನಪದ ಹಾಡು ಹಾಗೂ ಕುಣಿತದ ತರಬೇತಿ ನೀಡಿದ್ದಾರೆ. ಮನೆಯಂಗಳ ಗುಡಿಸುತ್ತ, ಬಾವಿಯಲ್ಲಿ ನೀರು ಸೇದುತ್ತ, ಹೂ ಕೊಯ್ಯುತ್ತ, ಅಕ್ಕಿ ಆರಿಸುತ್ತ, ಅರುಕಲ್ಲಿನಲ್ಲಿ ಮಸಾಲೆ ಹಾಕಿ ರುಬ್ಬುತ್ತ, ಮಕ್ಕಳಿಗೆ ಕಥೆ ಹೇಳುತ್ತ, ತನ್ನ ಪಾಡಿಗೆ ತಾನು ಹಾಡು ಹೇಳುತ್ತ, ಯಾರಾದರೂ ಸಂದರ್ಶಿಸಲು ಬಂದರೆ ಅವರಿಗೆ ದಾರಿ ತೋರಿಸುತ್ತ ಖುಷಿಯಾಗಿದ್ದ ಅಜ್ಜಿ 'ಹುಟ್ಟುದು ಚಾಯೂದು ಯಾರ್ ಕೂಡೆ ಇದು? ಯಾರ್ ಕೂಡೂ ಇಲ್ಲ. ಬರುವಾಗೆ ಬೆತ್ಲೆ. ಹೋಗುವಾಗೇ ಕತ್ಲೆ. ಅಟ್ಟೆಯಾ' ಎನ್ನುತ್ತಿದ್ದರು, ಆ ಮಾತಿಗೆ ತಕ್ಕಂತೆಯೇ ಬದುಕಿನ ಅಧ್ಯಾಯ ಮುಗಿಸಿದ್ದಾರೆ.

ಪ್ರತಿಕ್ರಿಯಿಸಿ: **feedback@sudha.co.in**

